**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ರವರು 330ನೇ ನಿಯಮದ ಮೇರೆಗೆ ನೀಡಿರುವ ಸೂಚನೆಗೆ ಉತ್ತರ.**

**ಸೂಚನೆ:**

ಬೆಂಗಳೂರಿನ ಪಾರಂಪರಿಕ ಸೊಬಗು ಬಹಳ ಅಪಾಯದಲ್ಲಿದೆ, ಆಧುನಿಕತೆಯೊಂದಿಗೆ ಹೆಜ್ಜೆ ಹಾಕುತ್ತಿರುವ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಪಾರಂಪರಿಕ ಕಟ್ಟಡಗಳ ಶೈಲಿ, ವಿನ್ಯಾಸ ಮತ್ತು ವಾಸ್ತು ಶಿಲ್ಪ ಕಲಾ ಸೊಬಗಿನ ಆಕರ್ಷಣೆಯಲ್ಲಿ ತನ್ನತನವನ್ನು ಎಂದೂ ಬಿಟ್ಟು ಕೊಟ್ಟಿಲ್ಲ. ಶತಮಾನ ಪೂರೈಸಿರುವ ಇಂತಹ ಶ್ರೀಮಂತ ಕಲಾ ಪರಂಪರೆಯುಳ್ಳ ಹತ್ತಾರು ಕಟ್ಟಡಗಳು ನಗರದಲ್ಲಿವೆ. ಅವು ಈಗ ಪುರಾತತ್ವ ಇಲಾಖೆಯ ರಕ್ಷಣೆಯನ್ನು ಎದುರು ನೋಡುತ್ತಿವೆ.

ಬೆಂಗಳೂರು ನಗರದಲ್ಲಿ ಬಸವೇಶ್ವರ ದೇವಾಲಯ (ದೊಡ್ಡ ಗಣಪತಿ), ಬೌರಿಂಗ್ ಸಂಸ್ಥೆ ಕಟ್ಟಡ, ಗವಿಗಂಗಾಧರೇಶ್ವರ ದೇವಾಲಯ, ಕೆಂಪೇಗೌಡರ ಕಾಲದ ಗುಡಿ ಹಾಗೂ ಗೋಪುರಗಳು ಹೀಗೆ ಬೆಂಗಳೂರಿನಲ್ಲಿ ಸುಮಾರು 105, ಬೆಳಗಾವಿಯಲ್ಲಿ 365, ಕಲಬುರಗಿಯಲ್ಲಿ 249 ಹಾಗೂ ಮೈಸೂರಿನಲ್ಲಿ ಸುಮಾರು 129 ಪಾರಂಪರಿಕ ಕಟ್ಟಡಗಳಿವೆ ಇವುಗಳ ರಕ್ಷಣೆಗೆ ಸರ್ಕಾರ ಒತ್ತು ನೀಡಬೇಕಾಗಿರುವುದರಿಂದ ಈ ವಿಷಯವನ್ನು ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:**

- ಪುರಾತತ್ವ ಇಲಾಖೆಯು 2002 ರಿಂದ ಸರ್ಕಾರಿ:ಖಾಸಗಿ:ಸಾರ್ವಜನಿಕ ಸಹಭಾಗಿತ್ವದಲ್ಲಿ 40:40:20 ಅನುಪಾತದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ಸಹಯೋಗದಲ್ಲಿ ಸ್ಮಾರಕಗಳ ಸಂರಕ್ಷಣೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದ್ದು, ಇದುವರೆಗೆ ಈ ಯೋಜನೆಯಡಿ ವೆಚ್ಚವಾಗಿರುವ ಒಟ್ಟು ರೂ.35.37 ಕೋಟಿಗಳ ಪೈಕಿ ಸರ್ಕಾರದ ವಂತಿಕೆ ರೂ.10.80 ಕೋಟಿಗಳ ವೆಚ್ಚದಲ್ಲಿ ಒಟ್ಟು 192 ದೇವಾಲಯ/ಸ್ಮಾರಕಗಳನ್ನು ಜೀರ್ಣೋದ್ಧಾರ ಮಾಡಿ ಪುನರುಜ್ಜೀವನಗೊಳಿಸಲಾಗಿದೆ.

- 2019-20ನೇ ಸಾಲಿನ ಆಯವ್ಯಯ ಭಾಷಣದ (ಕಂಡಿಕೆ- 309)ರ ಘೋಷಣೆಯನ್ವಯ, ಇಲಾಖೆಯ ಸಂರಕ್ಷಿತ ಸ್ಮಾರಕಗಳನ್ನು ಐದು ವರ್ಷಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು, ಇವರ ವತಿಯಿಂದ 3ಡಿ ಲೇಸರ್ ಸ್ಕ್ಯಾನಿಂಗ್ ಮೂಲಕ ಸ್ಮಾರಕಗಳ ಡಿಜಿಟಲೀಕರಣವನ್ನು ರೂ.64.91ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ದಿನಾಂಕ: 04.10.2019ರಂದು ಯೋಜನೆಗೆ ಚಾಲನೆ ನೀಡಲಾಗಿದೆ. ಒಟ್ಟಾರೆ 520 ಸ್ಮಾರಕಗಳ ಡಿಜಿಟಲೀಕರಣ ಪೂರ್ಣಗೊಂಡಿದ್ದು, ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಉಳಿದ 294 ಸ್ಮಾರಕಗಳ 3ಡಿ ಲೇಸರ್ ಸ್ಕ್ಯಾನಿಂಗ್ ಕಾರ್ಯವು ಪ್ರಗತಿಯಲ್ಲಿದ್ದು, ಈ ಆರ್ಥಿಕ ಸಾಲಿನಲ್ಲಿ ಶೇ.100 ರಷ್ಟು ಪ್ರಗತಿಯನ್ನು ಸಾಧಿಸಲಾಗುವುದು.

- ರಾಜ್ಯದಲ್ಲಿ 25 ಸಾವಿರಕ್ಕೂ ಮೇಲ್ಪಟ್ಟ ಅರಕ್ಷಿತ ಸ್ಮಾರಕಗಳಿರುವ ಕುರಿತು ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿರುವ ಪ್ರಾಚ್ಯಾವಶೇಷಗಳನ್ನು ಗ್ರಾಮವಾರು ಸಮೀಕ್ಷೆಯ ಮೂಲಕ ಇವುಗಳ ದಾಖಲೀಕರಣಗೊಳಿಸಿ ರಾಜ್ಯ ರಿಜಿಸ್ಟರ್ ದಾಖಲಿಸಿ, ಸದರಿ ಮಾಹಿತಿಯನ್ನು The National Mission on Monuments and Antiquities (NMMA)ನ ರಾಷ್ಟ್ರೀಯ ರಿಜಿಸ್ಟರ್‌ಗೆ ಒದಗಿಸಲಾಗುವುದು.

- 2020-21ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದ ಐತಿಹಾಸಿಕ ಮಹತ್ವವುಳ್ಳ ಪ್ರಾಚ್ಯಾವಾಶೇಷಗಳನ್ನು (ದೇವಾಲಯಗಳು, ಮಸೀದಿ, ಇಗರ್ಜಿಗಳು, ಶಿಲ್ಪಗಳು, ಶಿಲಾಶಾಸನಗಳು, ನಾಣ್ಯಗಳು, ತಾಮ್ರಪಟಗಳು, ಕಲಾಕೃತಿಗಳು ಇತ್ಯಾದಿ) ಗ್ರಾಮವಾರು ಸಮೀಕ್ಷೆಯ ಮೂಲಕ ಸರ್ವೇ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. 2022-23ನೇ ಆರ್ಥಿಕ ಸಾಲಿನಲ್ಲಿ ರಾಜ್ಯದ 18 ತಾಲ್ಲೂಕುಗಳನ್ನು ಆಯ್ಕೆಗೊಳಿಸಿ ಇಲಾಖೆಯ ಸಿಬ್ಬಂದಿಗಳ ಮೂಲಕ ಗ್ರಾಮವಾರು ಸಮೀಕ್ಷೆ ಪೂರ್ಣಗೊಂಡಿದ್ದು, ದಾಖಲೀಕರಣ ಕಾರ್ಯವು ಪ್ರಗತಿಯಲ್ಲಿದೆ.

- ರಾಜ್ಯದ ಸ್ಮಾರಕಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (CSR Fund) ಬಳಸಿಕೊಂಡು ರಾಜ್ಯದಲ್ಲಿರುವ ಸ್ಮಾರಕಗಳನ್ನು ಸಂರಕ್ಷಿಸುವ ಸಲುವಾಗಿ "Adopt a Monument" ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ರಾಜ್ಯ ಸಂರಕ್ಷಿತ ಸ್ಮಾರಕಗಳಲ್ಲಿ ಆಯ್ದ 53 ಸ್ಮಾರಕಗಳ ದತ್ತು ಪಡೆಯಲು Expression of interest ಕರೆಯಲಾಗಿದ್ದು, ಇವುಗಳಲ್ಲಿ ಈ ಕೆಳಕಂಡ ಎರಡು ಸ್ಮಾರಕಗಳನ್ನು ಆಸಕ್ತ ಸಂಸ್ಥೆಗಳು ದತ್ತು ಪಡೆಯಲಾಗಿದ್ದು, ಒಡಂಬಡಿಕೆಗೆ ಸಹಿ ಮಾಡಲು ಕ್ರಮವಹಿಸಲಾಗಿದೆ.
    - ವಿಜಯಪುರ ನಗರದ ತಾಜ್ ಬಾವಡಿ ಸ್ಮಾರಕ (ಸಂರಕ್ಷಣೆಗಾಗಿ)
    - ಕೊಪ್ಪಳ ಜಿಲ್ಲೆ, ಆನೆಗೊಂದಿಯ ಗಗನ್ ಮಹಲ್ ಸ್ಮಾರಕ (ನಿರ್ವಹಣೆ)

...2

- ಸರ್ಕಾರದ ಆದೇಶ ಸಂಖ್ಯೆ : ನಅಇ 597 ಮೈಅಪ್ರಾ 2011(ಭಾಗ-2) ದಿನಾಂಕ : 12.01.2016 ರ ಪ್ರಕಾರ, ಮೈಸೂರು-ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆ-2031 (ಪರಿಷ್ಕೃತ-2)ರಲ್ಲಿ ಮೈಸೂರಿನಲ್ಲಿರುವ 131 ಪಾರಂಪರಿಕ ಕಟ್ಟಡಗಳನ್ನು ಗುರುತಿಸಿ ಪಟ್ಟಿ ಮಾಡಿ, ಪಾರಂಪರಿಕ ಕಟ್ಟಡಗಳೆಂದು ಘೋಷಿಸಲಾಗಿದೆ.

- ನಗರಾಭಿವೃದ್ಧಿ ಇಲಾಖೆಯ ಗೆಜೆಟ್ ನೋಟಿಫಿಕೇಷನ್ ಸಂಖ್ಯೆ: ನಅಇ 04 ಟಿಟಿಪಿ 2013, ದಿ: 21.04.2020 ರನ್ವಯ ನಗರಾಭಿವೃದ್ಧಿ ಇಲಾಖೆಯು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ-13(ಇ)ರಡಿ ರಾಜ್ಯದ ನಗರ / ಪಟ್ಟಣಗಳ ವಲಯ ನಿಯಮಾವಳಿಗಳಿಗೆ ತಿದ್ದುಪಡಿ ತಂದಿದೆ. ಇದರನ್ವಯ ಝೋನಲ್ ರೆಗ್ಯೂಲೇಷನ್ (ಅಮೆಂಡ್‌ಮೆಂಟ್) 2020 ಅಸ್ತಿತ್ವಕ್ಕೆ ಬಂದಿರುತ್ತದೆ. ಸದರಿ ರೆಗ್ಯೂಲೇಷನ್‌ರನ್ವಯ ಬೆಂಗಳೂರು ಜಿಲ್ಲೆಯನ್ನು ಹೊರತುಪಡಿಸಿ, ರಾಜ್ಯದ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 'ಪಾರಂಪರಿಕ ಸಂರಕ್ಷಣಾ ಸಮಿತಿ'ಯನ್ನು ರಚಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

- ಸದರಿ ರೆಗ್ಯೂಲೇಷನ್‌ರನ್ವಯ ಪಾರಂಪರಿಕ ಕಟ್ಟಡಗಳು/ತಾಣಗಳೆಂದು ಗುರುತಿಸುವುದು, ಘೋಷಿಸುವುದು ಹಾಗೂ ವರ್ಗೀಕರಿಸುವುದು ಆಯಾ ಜಿಲ್ಲೆಗಳ ಪಾರಂಪರಿಕ ಸಂರಕ್ಷಣಾ ಸಮಿತಿಯು ಮಾಡಬೇಕಾಗಿರುತ್ತದೆ ಹಾಗೂ ಯಾವುದೇ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ, ನವೀಕರಣ, ವರ್ಗೀಕರಣ, ಸೌಂದರ್ಯೀಕರಣ ಮಾಡಬೇಕಾದ ಸಂದರ್ಭದಲ್ಲಿ ಪಾರಂಪರಿಕ ಸಂರಕ್ಷಣಾ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ. ಸದರಿ ಸಮಿತಿಗೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ ಹಾಗೂ ಆಯಾ ಜಿಲ್ಲೆಗಳ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ.

- INTACH (ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರ್ ಹೆರಿಟೇಜ್) ಸಂಸ್ಥೆಯು ಬೆಂಗಳೂರು ನಗರದಲ್ಲಿರುವ ಸುಮಾರು 49 ಪಾರಂಪರಿಕ ಕಟ್ಟಡಗಳನ್ನು ಗುರುತಿಸಿ ಅವುಗಳ ಪಟ್ಟಿಯನ್ನು ದಿನಾಂಕ:23.02.2016 ರಂದು ಸಲ್ಲಿಸಿರುತ್ತಾರೆ. ಸದರಿ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವ ಸಂಬಂಧ ನಗರಾಭಿವೃದ್ಧಿ ಇಲಾಖೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976ರ ಕಲಂ 51ರನ್ವಯ ಸರ್ಕಾರದ ಆದೇಶ ಸಂಖ್ಯೆ:ನಅಇ 33 ಬೆಂಅಸೇ 2021 ದಿನಾಂಕ: 22.08.2021 ರಲ್ಲಿ Bengaluru Urban Art Commission ರಚಿಸಿದ್ದು, ಸದರಿ ಪಾರಂಪರಿಕ ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳೆಂದು ಘೋಷಿಸಿ ಅಧಿಸೂಚನೆ ಹೊರಡಿಸಲು ಕ್ರಮವಹಿಸುವಂತೆ ದಿನಾಂಕ:12.09.2019 ರಂದು ಮತ್ತು ದಿನಾಂಕ:16.07.2020 ಹಾಗೂ 02.12.2022ರಂದು ಆಯುಕ್ತರು, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಇವರಿಗೆ ಪತ್ರ ಬರೆಯಲಾಗಿರುತ್ತದೆ.

**ಸಂಖ್ಯೆ: TOR 97 TDV 2023**

(ಎಚ್.ಕೆ.ಪಾಟೀಲ್)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು